	ವಿವರಗಳನ್ನು ಒದಗಿಸುವುದು?	
ಆ.	ಈ ಅವಧಿಯಲ್ಲಿ ಬೀದರ್ ಜಿಲ್ಲೆಯಿಂದ ಸಾಲ/ಅನುದಾನವನ್ನು ಕೋರಿ ನಿಗಮಕ್ಕೆ ಬಂದಿದ್ದ ಅರ್ಜಿಗಳು ಎಷ್ಟು?	ಬೀದರ್ ಜಿಲ್ಲೆಯಿಂದ ಸಾಲವನ್ನು ಕೋರಿ ೧೬೪೫ ಅರ್ಜಿಗಳು ಸ್ವೀಕೃತಗೊಂಡಿರುತ್ತದೆ.
ಇ.	ಈ ಪೈಕಿ ಎಷ್ಟು	೪೦೨ ಅರ್ಜಿಗಳನ್ನು ಮಾನ್ಯ ಮಾಡಿ ಸಾಲ ಬಿಡುಗಡೆ ಮಾಡಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೬೭೮ (೨೧೩೧)

ಸದಸ್ಯರ ಹೆಸರು : ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟಾ)

ಉತ್ತರಿಸುವ ಸಚಿವರು : ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಸಮಾನ ಕಲ್ಯಾಣ ಸಚಿವರು)

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಉತ್ತರ ಕನ್ನಡ ಜಿಲ್ಲೆಯಲ್ಲಿ ಬಹಳಷ್ಟು ಸಂಖ್ಯೆಯಲ್ಲಿರುವ ಹಾಲಕ್ಕಿ ಒಕ್ಕಲು ಜಾತಿಯವರು ಆರ್ಥಿಕವಾಗಿ ಸಾಮಾಜಿಕವಾಗಿ ಅತೀ ಹಿಂದುಳಿದಿರುವುದನ್ನು ಪರಿಗಣಿಸಿ ಪರಿಶಿಷ್ಟ ಪಂಗಡಕ್ಕೆ	ಉತ್ತರ ಕನ್ನಡ ಜಿಲ್ಲೆಯ ಹಾಲಕ್ಕಿ ಒಕ್ಕಲು ಜನಾಂಗ ವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಕುರಿತು ಕುಲ ಶಾಸ್ತ್ರೀಯ ಅಧ್ಯಯನ ಮಾಡುವ ಅವಶ್ಯಕತೆ ಇರುತ್ತದೆ ಅಧ್ಯಯನದ ಆಧಾರದ ಮೇಲೆ ನಿಷ್ಕರ್ಷಿಸಿ, ಕೇಂದ್ರ ಸರ್ಕಾರಕ್ಕೆ ಪ್ರಸ್ತಾವವನ್ನು ಸಲ್ಲಿಸಬೇಕಗುತ್ತದೆ.

	ಸೇರ್ಪಡೆಗೊಳಿಸುವ ಬಗ್ಗೆ ಸರ್ಕಾರ ಗಮನಿಸಿದೆಯೇ?	
ಆ)	ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?	ಮುಂಬರುವ ದಿನಗಳಲ್ಲಿ ಅನುದಾನದ ಲಭ್ಯತೆಯ ಮೇರೆಗೆ ಆದ್ಯಯನ ಕಾರ್ಯವನ್ನು ಕೈಗೊಳ್ಳಲು ಕ್ರಮ ಜರುಗಿಸಲಗುವುದು.
ಇ)	ಹಾಗಿದ್ದಲ್ಲಿ, ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆಗೊಳಿಸಲು ಯಾವಾಗ ಕ್ರಮ ಗೈಗೊಳ್ಳಲಾಗುವುದು?	ಕುಳಶಾಸ್ತ್ರೀಯ ಅಧ್ಯಯನ ವರದಿಯ ಹಿನ್ನಲೆಯಲ್ಲಿ ಕ್ರಮ ಕೈಗೊಳ್ಳಬೇಕಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೬೭೯ (೧೯೬೬)

ಸದಸ್ಯರ ಹೆಸರು : ಶ್ರೀ ಮೋಹನ್ ಪಿ.ಸಿ. (ಚಿಕ್ಕಪೇಟೆ)

ಉತ್ತರಿಸುವ ಸಚಿವರು : ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು (ಹುದ್ದೆವಾರು ವಿವರ ನೀಡುವುದು) ;</td><td>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳು ೧೪೭೭೦. ವಿವರ ಈ ಕೆಳಗಿನಂತಿದೆ.
<table>
<tr><th rowspan="2">ಕ್ರ. ಸಂ.</th><th rowspan="2">ಇಲಾಖೆ</th><th colspan="4">ವರ್ಗವಾರು ಹುದ್ದೆಗಳು</th></tr>
<tr><th>ಎ</th><th>ಬಿ</th><th>ಸಿ</th><th>ಡಿ</th></tr>
<tr><td>೧</td><td>ಆರೋಗ್ಯ ಮತ್ತು</td><td>೭೯೪</td><td>೨೪೧೧</td><td>೭೮೬೬</td><td>೩೨೪೭</td></tr>
</table>
</td></tr>
</table>